ರಾಜ್ಯದಲ್ಲಿ ಕಲಾವಿದರ ಮಾಸಾಶನ

4952 - ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪ್ರಸ್ತುತ ಎಷ್ಟು ಜನ ಕಲಾವಿದರು ಮಾಸಾಶನ ಪಡೆಯುತ್ತಿದ್ದಾರೆ?*

ಆ) *ಈ ವರ್ಷ ಇದುವರೆಗೆ ಎಷ್ಟು ಜನ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲಾಗಿದೆ?*

ಇ) *ಕಲಾವಿದರಿಗೆ ಪ್ರಸ್ತುತ ನೀಡುತ್ತಿರುವ ಮಾಸಾಶನ ತುಂಬಾ ಕಡಿಮೆಯಾಗಿದ್ದು ಮಾಸಾಶನ ಮೊತ್ತ ಹೆಚ್ಚಿಸಲು ಸರ್ಕಾರ ಪರಿಶೀಲಿಸುತ್ತಿದೆಯೇ?*

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯವರು) :

ಅ) ಒಟ್ಟು 8104 ಜನ ಕಲಾವಿದರು ಮಾಸಾಶನ ಪಡೆಯುತ್ತಿದ್ದಾರೆ. 868 ವಿಧವಾ ಮಾಸಾಶನ ಪಡೆಯುತ್ತಿದ್ದಾರೆ.

ಆ) 2000-01ನೇ ಸಾಲಿನಲ್ಲಿ ವಿವಿಧ ಕ್ಷೇತ್ರಗಳಲ್ಲಿನ 535 ಜನ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಿದೆ.

ಇ) ಹೌದು.

ನರಗುಂದ – ಸಿಂಧನೂರು ರಸ್ತೆ ದುರಸ್ತಿ

4953 - ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನರಗುಂದ - ಸಿಂಧನೂರು ರಸ್ತೆ ಯಾವ ವರ್ಷ ನಿರ್ಮಾಣವಾಗಿದೆ?*

ಆ) *ಇಲ್ಲಿಯವರೆಗೆ ಎಷ್ಟು ಭಾರಿ ಮರು ಡಾಂಬರೀಕರಣ ಮಾಡಲಾಗಿದೆ?*

ಇ) *ಈ ರಸ್ತೆ ಮೇಲೆ 30 ರಿಂದ 40 ಟನ್ ಭಾರದ ಗ್ರಾನೈಟ್ ಕಲ್ಲುಗಳ ಲಾರಿ ತಿರುಗಾಡಿ ರಸ್ತೆ ಸಂಚಾರಕ್ಕೆ ಸಂಪೂರ್ಣ ಅನರ್ಹವಾಗಿದ್ದು ಈ ರಸ್ತೆ ದುರಸ್ತಿ ಕಾರ್ಯ ಆರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಈ ರಸ್ತೆಯು 1965ರಲ್ಲಿ ನಿರ್ಮಾಣಗೊಂಡಿದೆ.

ಆ) 156.50 ಕಿ.ಮೀ. ಉದ್ದದ ರಸ್ತೆಯಲ್ಲಿ 100.20 ಕಿ.ಮೀ. ಭಾಗವನ್ನು ವಿವಿಧ ಸಾಲುಗಳಲ್ಲಿ ಒಂದು ಬಾರಿ ಮರು ಡಾಂಬರೀಕರಣ ಮಾಡಲಾಗಿದೆ.